**PCR NO**. 14824/2022 **CW** 1

30 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.

ಪಿ.ಸಿ.ಆರ್.ನಂ:14824/2022 **ಸಿಡಬ್ಲ್ಯೂ** -1

| | |
|---|---|
| ಸಾಕ್ಷಿಯ ಹೆಸರು | ಪುಲ್ಲಾರಾವ್ |
| ತಂದೆಯ ಹೆಸರು | ನಾಗೇಶ್ವರ್ ರಾವ್ |
| ವಯಸ್ಸು | 32 ವರ್ಷ |
| ಉದ್ಯೋಗ | ಮ್ಯಾನೇಜರ್ , ಮಣಪ್ಪುರಂ ಫೈನಾನ್ಸ್ |
| ವಿಳಾಸ | ಬೆಂಗಳೂರು. |

ಸಾಕ್ಷಿಯನ್ನು ಈ ದಿವಸ ದಿನಾಂಕ:14-02-2023 ರಂದು ಕರೆಯಿಸಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಡಿಯಲ್ಲಿ ಪ್ರಮಾಣೀಕರಿಸಿ ದಾಖಲಿಸಿದ ಹೇಳಿಕೆ**:**

**ಕಳೆದ ಒಂದು ತಿಂಗಳಿನಿಂದ ಬೆಂಗಳೂರಿನಲ್ಲಿರುವ ಕೋಣನಕುಂಟೆಯಲ್ಲಿರುವ ಮಣಪ್ಪುರಂ ಫೈನಾನ್ಸ್ ಶಾಖೆ ಸೇರಿ ಒಟ್ಟು ಐದು ಪ್ರದೇಶಗಳಲ್ಲಿ ಮಣಪ್ಪುರಂ ಫೈನಾನ್ಸ್ ನ ಏರಿಯಾ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

**ಮುಂದುವರಿದ** ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಡಿಯಲ್ಲಿ ಪ್ರಮಾಣೀಕರಿಸಿ ದಾಖಲಿಸಿದ ಹೇ **ಳಿಕೆಗೆ ಕಾಲಾವಕಾಶವನ್ನು ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿದೆ**)**

ಓ ಹೇ ಕೇ ಸ ಇ

30ನೇ ಅ.ಮು.ಮ.ದಂ. ಬೆಂಗಳೂರು.

ಪುನಃ ಸಾಕ್ಷಿಯನ್ನು ಈ ದಿವಸ ದಿನಾಂಕ:14-02-2023 ರಂದು ಮಧ್ಯಾಹ್ನ 04-37 ಗಂಟೆಗೆ ಕರೆಯಿಸಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಡಿಯಲ್ಲಿ ಪ್ರಮಾಣೀಕರಿಸಿ ದಾಖಲಿಸಿದ ಹೇಳಿಕೆ:

ಆರೋಪಿಯು ಕೋಣನಕುಂಟೆಯಲ್ಲಿರುವ ನಮ್ಮ ಫೈನಾನ್ಸ್ ಗೆ ದಿ:28-05-2022 ರಂದು ಚಿನ್ನದ ಮೇಲೆ ಸಾಲ ಪಡೆಯಲು ಬಂದಿದ್ದನು. ಮೊದಲಿಗೆ ಆರೋಪಿಗೆ ಸಂಬಂಧಪಟ್ಟ ಕೆವೈಸಿಯನ್ನು ಪರಿಶೀಲಿಸಲಾಯಿತು. ಆರೋಪಿ ಸಾಲ ಪಡೆಯಲು ತಂದಿದ್ದ ಚಿನ್ನದ ಬಳೆಯನ್ನು ಆಗಿನ ಬ್ರಾಂಚ್ ಮ್ಯಾನೇಜರ್ ಶಕ್ತಿವೇಲು ಪರಿಶೀಲಿಸಿದರು. ಆ ನಂತರ ಆರೋಪಿಯಿಂದ ಡಿಪಿ ನೋಟ್ ಪಡೆದುಕೊಂಡು, ರೂ.1,70,170/-ಗಳನ್ನು ಕೊಡಲಾಯಿತು.

ಪ್ರತಿ ಮೂರು ತಿಂಗಳಿಗೊಮ್ಮೆ ಆಡಿಟ್ ನೋಡುವಾಗ ಆರೋಪಿ ಗಿರವಿ ಇಟ್ಟ ಚಿನ್ನವನ್ನು ಪರಿಶೀಲಿಸಲಾಯಿತು. ಆಡಿಟರ್ ಇವರು ಆರೋಪಿ ಗಿರವಿ ಇಟ್ಟ ಚಿನ್ನದ ಬಳೆಯನ್ನು ಪರಿಶೀಲಿಸಿದಾಗ ಅದು ಕೆಳಮಟ್ಟದ ಚಿನ್ನ ಅಂತ ಗೊತ್ತಾಯಿತು. ಈ ವಿಷಯ ತಿಳಿದ ನಂತರ ಕೆ ಎಸ್ ಲೇಔಟ್ ಪೋಲಿಸ್ ಠಾಣೆಗೆ ಹೋಗಿ ದೂರು ಕೊಡಲಾಯಿತು. ಪೋಲಿಸರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ

ಆ ನಂತರ ನನ್ನ ಇಂದಿನ ಅಧಿಕಾರಿಗಳು ಖಾಸಗಿ ದೂರು ಕೊಟ್ಟರು. ಆದ್ದರಿಂದ ಆರೋಪಿ ವಿರುದ್ಧ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೋರಿಕೊಳ್ಳುತ್ತೇನೆ

ಪ್ರಶ್ನೆ -1 ಆಗಿನ ಬ್ರಾಂಚ್ ಮ್ಯಾನೇಜರ್ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆಯೇ?

ಉ:- ನನಗೆ ಗೊತ್ತಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿದೆ)

ಓ ಹೇ ಕೇ ಸ ಇ

30ನೇ ಅ.ಮು.ಮ.ದಂ. ಬೆಂಗಳೂರು.